# ದಿನಾಂಕ:19-12-2020 ರಂದು ಬೆಳಗ್ಗೆ 11.00 ಗಂಟೆಗೆ ವಾರ್ಡ್ ಸಂಖ್ಯೆ.38 ಹೆಚ್.ಎಂ.ಟಿ. ವಾರ್ಡ್ ಕಛೇರಿಯಲ್ಲಿ ನಡೆದ ವಾರ್ಡ್ ಸಮಿತಿ ಸಭೆಯ ನಡುವಳಗಳು

**<u>ಹಾಜರಿದ್ದ ಅಧಿಕಾರಿಗಳು:</u>**

1. ಹೆಚ್.ಭೀಮೇಶ್, ಕಾರ್ಯಪಾಲಕ ಅಭಿಯಂತರರು (ಘನತ್ಯಾಜ್ಯ ನಿರ್ವಹಣೆ ಬಿಬಿಎಂಪಿ ಹಾಗೂ ವಾ.38ರ ನೋಡಲ್ ಅಧಿಕಾರಿಗಳು)
2. ಬಿ.ಎನ್.ಲಕ್ಷ್ಮೀಶ್ ಗೌಡ, ಸಹಾಯಕ ಅಭಿಯಂತರರು,( ವಾರ್ಡ್ ನಂ.38) ಮತ್ತು ಸಂಚಾಲಕರು
3. ನಾರಾಯಣ್, ಹಿರಿಯ ಆರೋಗ್ಯ ಪರಿವೀಕ್ಷಕರು, (ವಾರ್ಡ್ ನಂ.38)
4. ತನುಜಾ, ಕಿರಿಯ ಆರೋಗ್ಯ ಪರಿವೀಕ್ಷಕರು, (ವಾರ್ಡ್ ನಂ.38)
5. ಚಂದ್ರಶೇಖರ್ ಸಹಾಯಕ ಅಭಿಯಂತರರು ವಾರ್ಡ್ ನಂ.38
6. ಲಕ್ಷ್ಮಿ ಪ್ರಸಾದ್ ಪರಿವೀಕ್ಷರು ಜಲಮಂಡಳ ಪೀಣ್ಯಾ
7. ತಿರುಪಾಲ್, ಕಂದಾಯ ಪರಿವೀಕ್ಷಕರು, ಹೆಚ್.ಎಂ.ಟಿ.ವಾರ್ಡ್ ನಂ.38
8. ಡಾ||ಜಿ.ಎಂ.ರೇಣುಕಾ ಪ್ರಸಾದ್, ಎಂ.ಓ., ನಂದಿನಿ ಬಡಾವಣೆ.
9. ಬೈಲವೆಂಕಟಪ್ಪ ಹೆಡ್ ಗ್ಯಾಂಗ್ ಮ್ಯಾನ್ ಹೆಚ್.ಎಂ.ಟಿ.ವಾರ್ಡ್ ನಂ.38
10. ಮೋಹಿನಿ, ಲಿಂಕ್ ವರ್ಕರ್ ವಾರ್ಡ್ ನಂ.38
11. ಭಾರತಿ. ಲಿಂಕ್ ವರ್ಕರ್ ವಾರ್ಡ್ ನಂ.38
12. ಕಾಂತರಾಜ್ ಮರ್ಷಲ್ ವಾರ್ಡ್ ನಂ.38

ಮೇಲೆ ಹಾಜರಿದ್ದ ಅಧಿಕಾರಿಗಳು ಹಾಗೂ ಸಮಿತಿ ಸದಸ್ಯರ ಸಮ್ಮುಖದಲ್ಲಿ ವಾರ್ಡ್ ಸಂಖ್ಯೆ 38 ರ ಕಾರ್ಯದರ್ಶಿಗಳು ಹಾಗೂ ಸಹಾಯಕ ಅಭಿಯಂತರರು ರವರು ಸಭೆಯನ್ನುದ್ದೇಶಿಸಿ ಮಾತನಾಡುತ್ತಾ,

ಶ್ರೀ.ನಾರಾಯಣ ಹಿರಿಯ ಆರೋಗ್ಯ ಪರಿವೀಕ್ಷಕರು ರವರು ಮಾತನಾಡಿ ಕ್ರಿಮಿಟೋರಿಯಮ್ ಶೌಚಾಲಯದ ನೀರು ಕಟ್ಟಿಕೊಂಡಿರುವುದರಿಂದ ಜಟ್ಟಿಂಗ್ ಮಿಷಿನ್‌ನಲ್ಲಿ ಸ್ವಚ್ಛಗೊಳಸಲು ಜಲಮಂಡಳಿಯವರಿಗೆ ವರ್ಕ್ ಇನ್ಸ್‌ಪೆಕ್ಟ್ ರ್ ರವರಿಗೆ ಕ್ರಮವಹಿಸಲು ತಿಳಸಲಾಯಿತು.

ಶ್ರೀ.ರಮೇಶ್ ಸ್ಥಳೀಯರು ಮಾತನಾಡಿ ಮಸೀದಿ ರಸ್ತೆಯಲ್ಲಿ ಜಲಮಂಡಳಿಯ ಕೆಲಸವಾಗಿದ್ದು ಅಗೆತದ ನಂತರ ಗುಂಡಿಗಳನ್ನು ಮುಚ್ಚಿದರು ರಸ್ತೆಗಳು ಹಾಳಗಿರುವುದರಿಂದ ರಸ್ತೆಗಳನ್ನು ಸರಿಪಡಿಸಲು ಸಂಬಂಧಪಟ್ಟ ತಿಳಸಲು ನೋಡೆಲ್ ಅಧಿಕಾರಿಯವರಿಗೆ ಕೋರಿದರು ಇದನ್ನು ನೋಡೆಲ್ ಅಧಿಕಾರಿಗಳು ಸಂಬಂಧಪಟ್ಟ ಜಲಮಂಡಳ ಅಧಿಕಾರಿಗಳೊಂದಿಗೆ ದೂರವಾಣಿ ಮುಖಾಂತರ ಮಾತನಾಡಿ ಕೂಡಲೇ ಕ್ರಮ ವಹಿಸಲು ಸೂಚಿಸಿದರು.

ಶ್ರೀ.ನಾಗರಾಜು.ಸ್ಥಳೀಯರು ಮಾತನಾಡಿ ಸರ್ಕಾರಿ ಪಿ.ಯು ಕಾಲೇಜಿನ ರಸ್ತೆಯ ನೆಲದ ಪೈಪಡಿಯಲ್ಲಿ ಸಮತೋಲನ ಇಲ್ಲದ ಕಾರಣ ಸಾರ್ವಜನಿಕರಿಗೆ ಸಮಸ್ಯೆ ಉಂಟಾಗುತ್ತಿದ್ದು, ಇದನ್ನು ಸರಿಪಡಿಸಲು ಮನವಿ ಮಾಡಿಕೊಂಡರು. ಹಾಗೂ ಎಸ್.ಆರ್.ಎಸ್.ಮುಖ್ಯರಸ್ತೆಯಲ್ಲಿ ವಾಹನ ಹೋಡಾಟ ದಟ್ಟಣೆಯಾಗಿರುವುದರಿಂದ ರಸ್ತೆಗಳಲ್ಲಿ ಗುಂಡಿಯಾಗಿರುವುದರಿಂದ ಸಾರ್ವಜನಿಕರಿಗೆ ತುಂಬಾ ತೊಂದರೆಯಾಗುತ್ತಿರುವುದರಿಂದ ಕೂಡಲೇ ಸರಿ ಪಡಿಸಲು ನೋಡಲೆ ಅಧಿಕಾರಿ ಯವರಿಗೆ ಮನವಿ ಮಾಡಿದರು.

ಶ್ರೀ.ಲಕ್ಷ್ಮಿಶ್ ಗೌಡ ಸಹಾಯಕ ಅಭಿಯಂತರರು ರವರು ಮಾತನಾಡಿ ವಾರ್ಡ್ ನಂ.38 ರಲ್ಲಿ ಮತದಾರರ ಗುರುತಿನ ಚೀಟಿ ಪರಿಷ್ಕರಣೆ ಮಾಡಿ ಮತ್ತು ಹೊಸದಾಗಿ ಚುನಾವಣಾ ಗುರುತಿನ ಚೀಟಿ ನೀಡಲು ಯಾವುದೇ ರೀತಿಯ ಮಾಹಿತಿಯನ್ನು ಸಾರ್ವಜನಿಕರಿಗೆ ನೀಡದೇ ಇರುವುದರಿಂದ ಸಂಬಂಧಪಟ್ಟ ಕಂದಾಯ ಪರಿವೀಕ್ಷಕರು ಮತ್ತು ಅಧಿಕಾರಿಯವರಿಗೆ ತಿಳಸಲು ಸೂಚಿಸಿದರು.

ಮು.ತಿ.ನೋ

Scanned by CamScanner

ಶ್ರೀ.ಮುನಿರಾಜು (ಅಂಗವೀಕಲರು) ಸ್ಥಳೀಯರು ಮಾತಾನಾಡಿ ವಾರ್ಡ್ ನಂ.38 ರಲ್ಲಿ ಅಂಗವೀಕಲಿಗೆ ಉಚಿತವಾಗಿ ಅಂಗವೀಕಲರ ವಾಹನಗಳನ್ನು ನೀಡಲು ಸಂಬಂಧಪಟ್ಟ ಕಲ್ಯಾಣ ಇಲಾಖೆಗೆ ಅರ್ಜಿ ಸಲ್ಲಿಸಿದರು ಇದುವರೆವಿಗೂ ವಾಹನ ನೀಡದೇ ಇರುವ ಬಗ್ಗೆ ನೋಡೆಲ್ ಅಧಿಕಾರಿಯವರ ಬಳಿ ತಿಳಿಸಿದರು, ನೋಡೆಲ್ ಅಧಿಕಾರಿ ಯವರು ಸಂಬಮಧಪಟ್ಟ ಕಲ್ಯಾಣ ಇಲಾಖೆಯ ಅಧಿಕಾರಿಯವರೊಂದಿಗೆ ದೂರವಾಣಿ ಮುಖಾಂತರ ಮಾತಾನಾಡಿ ಕೂಡಲೇ ಅಂಗವೀಕಲಿಗೆ ವಾಹನಗಳನ್ನು ನೀಡಲು ಸೂಕ್ತ ಕ್ರಮ ವಹಿಸುವಂತೆ ಸೂಚಿಸಿದರು.

ಈ ಎಲ್ಲಾ ವಿಷಯದ ಬಗ್ಗೆ ಚರ್ಚಿಸಲಾಗಿ ಸೂಕ್ತ ಕ್ರಮ ಕೈಗೊಳ್ಳುವ ನಿರೀಕ್ಷಣೆಯೊಂದಿಗೆ ಸಮಿತಿಯ ಅಧ್ಯಕ್ಷರು ಹಾಗೂ ನೋಡೆಲ್ ಅಧಿಕಾರಿಗಳಾದ ಹೆಚ್.ಭೀಮೇಶ್, ರವರು ಎಲ್ಲಾರಿಗೂ ವಂದನೆಗಳನ್ನು ಕೋರುತ್ತಾ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಸದಸ್ಯ ಕಾರ್ಯದರ್ಶಿ ಹಾಗೂ
ಸಹಾಯಕ ಅಭಿಯಂತರರು
ವಾರ್ಡ್ ಸಂಖ್ಯೆ.38

ಪ್ರತಿಯನ್ನು

1. ಮಾನ್ಯ ಆಯುಕ್ತರ ಆಪ್ತ ಸಹಾಯಕರಿಗೆ ಕಳುಹಿಸುತ್ತಾ ಮಾನ್ಯ ಆಯುಕ್ತರ ಗಮನಕ್ಕೆ ತರುವಂತೆ ಕೋರಿದೆ.
2. ವಿಶೇಷ ಆಯುಕ್ತರು ಆಡಳಿತ ರವರ ಅವಗಾಹನಗೆ ಸಲ್ಲಿಸಿದೆ.
3. ವಲಯ ಆಯುಕ್ತರು ರಾಜರಾಜೇಶ್ವರಿನಗರ ವಲಯ ರವರ ಅವಗಾಹನೆಗೆ ಸಲ್ಲಿಸಿದೆ.
4. ಜಂಟಿ ಆಯುಕ್ತರು ರಾಜರಾಜೇಶ್ವರಿನಗರವಲಯ ರವರ ಅವಗಾಹನೆಗೆ ಸಲ್ಲಿಸಿದೆ.
5. ಅಧ್ಯಕ್ಷರು ಹಾಗೂ ನೋಡಲ್ ಅಧಿಕಾರಿಗಳು ರವರ ಅವಗಾಹನೆಗೆ ಸಲ್ಲಿಸಿದೆ.

Scanned by CamScanner